**MVC No. 489/2023**
**RW-1**

**ದಿನಾಂಕ 8.7.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಎದುರುದಾರ ನಂ. 2 ರವರ ಪರ ಶ್ರೀ. ಪಿ.ವಿ.ಎಮ್. ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ನಾನೇ ಹೇಳಿ ಬರೆಸಿದ್ದು, ಅವು ಸತ್ಯ ಇರುತ್ತವೆ ಎಂದು ಪ್ರಮಾಣ ಮಾಡುತ್ತೇನೆ.

2ನೇ ಎದುರುದಾರ ಕಂಪನಿಯವರು ಬರೆದುಕೊಟ್ಟ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್.1 ಎಂದು ಗುರುತಿಸಲಾಯಿತು.

ವಿಮಾ ಪಾಲಿಸಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.-2 ಎಂದು ಗುರುತಿಸಲಾಯಿತು.

ಮದನೆ ಆಸ್ಪತ್ರೆ, ಉದಗೀರ್, ರವರು ನೀಡಿದ ಮರಾಠಿ ಭಾಷೆಯಲ್ಲಿರುವ ಎಮ್.ಎಲ್.ಸಿ. ಹಾಜರುಪಡಿಸಿದ್ದು ಅದನ್ನು ನಿ.ಆರ್-3 ಎಂದು ಗುರುತಿಸಲಾಯಿತು. ನಿ.ಆರ್-3 ರ ಆಂಗ್ಲ ಭಾಷೆಯಲ್ಲಿರುವ ತರ್ಜುಮೆಯ ಪ್ರತಿಯನ್ನು ನಿ.ಆರ್-3(ಎ) ಎಂದು ಗುರುತಿಸಲಾಯಿತು.

ಮದನೆ ಆಸ್ಪತ್ರೆ, ಉದಗೀರ್, ರವರು ನೀಡಿದ ಮರಾಠಿ ಭಾಷೆಯಲ್ಲಿರುವ ಎಮ್.ಎಲ್.ಸಿ. ಹಾಜರುಪಡಿಸಿದ್ದು ಅದನ್ನು ನಿ.ಆರ್-4 ಎಂದು ಗುರುತಿಸಲಾಯಿತು. ನಿ.ಆರ್-4 ರ ಆಂಗ್ಲ ಭಾಷೆಯಲ್ಲಿರುವ ತರ್ಜುಮೆಯ ಪ್ರತಿಯನ್ನು ನಿ.ಆರ್-4(ಎ) ಎಂದು ಗುರುತಿಸಲಾಯಿತು.

ಅನುವಾದಕಾರರ ಪ್ರಮಾಣ ಪತ್ರವನ್ನು ನಿ.ಆರ್-5 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು ಖರ್ಚು ಸಹಿತ ತಳ್ಳಿ ಹಾಕಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ. ಎಸ್.ಪಿ. ವಕೀಲರಿಂದಃ</u>**

ಬೆಳಕುಣಿಯಿಂದ ಭವಾನಿ ಬೀಜಲಗಾಂವ ಗ್ರಾಮಕ್ಕೆ ಹೋಗಲು ಯಾವುದೇ ವಾಹನಗಳ ಸೌಲಭ್ಯ ಇರದೇ ಇರುವುದರಿಂದ ಭವಾನಿ ಬೀಜಲಗಾಂವ ಗ್ರಾಮದ ಆಟೋ ಸಹಾಯದಿಂದ ಜನರು ಭವಾನಿ ಬೀಜಲಗಾಂವನಿಂದ ಬೆಳಕುಣಿ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಾರೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಭವಾನಿ ಬೀಜಲಗಾಂವ ಗ್ರಾಮದಲ್ಲಿ ದೊಂಬಾಳೆ ಮನೆತನದ ಸಾಕಷ್ಟು ಮನೆಗಳು ಇವೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಆದ್ದರಿಂದ ಈ ಪ್ರಕರಣದಲ್ಲಿರುವ 1 ನೇ ಎದುರುದಾರ ಮತ್ತು ಅರ್ಜಿದಾರ ಕೂಡ ದೊಂಬಾಳೆ ಹೆಸರು ಹೊಂದಿರುತ್ತಾರೆ ಮತ್ತು 1 ನೇ ಎದುರುದಾರನ ವಾಹನ ಚಾಲಕನ ನಿರ್ಲಕ್ಷ್ಯತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ದೊಂಬಾಳೆ ಮನೆತನದವರು ಮಿಲಾಪೆಯಾಗಿ ಪರಿಹಾರದ ಸಲುವಾಗಿ ಸುಳ್ಳು ಕೇಸು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ವಾಹನ ಸಂಖ್ಯೆ. ಕೆಎ-35/ಬಿ-5505 ವಾಹನ ಚಾಲಕನ ನಿರ್ಲಕ್ಷ್ಯತನದಿಂದ ಸದರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿರುವ ಹಾಗೇ ಅಪಘಾತದ ದಿನ ವಾಹನ ಸಂಖ್ಯೆ ಕೆಎ-35/ಬಿ-5505 ಎಲ್ಲಿಂದ ಎಲ್ಲಿಯವರೆಗೆ ಹೋಗುತ್ತಿತ್ತು ಎಂಬ ಬಗ್ಗೆ ನಮ್ಮ ಕಂಪನಿಯಿಂದ ಖಾಸಗಿ ತನಿಖೆ ಮಾಡಿಸಿಲ್ಲ. ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ. 30-3-2024 ರಂದು ಅಪಘಾತದ ನಂತರ ಅರ್ಜಿದಾರ ಮದನೆ ಆಸ್ಪತ್ರೆ ಉದಗೀರನಲ್ಲಿ ಚಿಕಿತ್ಸೆ ಪಡೆದಿದ್ದಾನೆ ಎಂದರೆ ನಿಜ. ಅದೇ ದಿನ ಸದರಿ ಆಸ್ಪತ್ರೆಯವರು ಎಮ್.ಎಲ್.ಸಿ. ಕಳುಹಿಸಿರುತ್ತಾರೆ ಎಂದರೆ ನಿಜ. ಮದನೆ ಆಸ್ಪತ್ರೆ, ಉದಗೀರನಿಂದ ಚಿಕಿತ್ಸೆ ಪಡೆದು ಬಿಡುಗಡೆ ಆದ ನಂತರ ಗುಣಮುಖ ಆದ ನಂತರ ಅರ್ಜಿದಾರನು ಕಮಲನಗರ ಪೋಲಿಸ್ ಠಾಣೆಗೆ ಹೋಗಿ ಘಟನೆಯ ಬಗ್ಗೆ ತಿಳಿಸಿದ್ದರಿಂದ ಹಾಗೂ ಅಂಚೆಯ ಮೂಲಕ ಮಹಾರಾಷ್ಟ್ರ ರಾಜ್ಯದ ಉದಗೀರನಿಂದ ಕರ್ನಾಟಕ ರಾಜ್ಯದ ಕಮಲನಗರ ಪೋಲಿಸ್ ಠಾಣೆಗೆ ಎಮ್.ಎಲ್.ಸಿ. ಮಾಹಿತಿ ಬರಲು ತಡವಾಗಿದ್ದರಿಂದ

ತಡವಾಗಿ ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಲ್ಲಿಸಿದ ದೋಷಾರೋಪಣಾ ಪಟ್ಟಿಯನ್ನು ಎಲ್ಲಿಯೂ ಚಾಲೆಂಜ್ ಮಾಡಿಲ್ಲ ಎಂದರೆ ಸಾಕ್ಷಿಯು ಅದಕ್ಕೆ ತಾನು ಪಕ್ಷಗಾರರು ಇರುವುದಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ ಇಲ್ಲ :</u>**

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ ಮೇಲೆ ಟೈಪ್/ಪ್ರಿಂಟ ಮಾಡಲಾಗಿದೆ ).

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಔರಾದ.